ಮಹತ್ವವೆನಿಸದ ಈ ಮೊಳೆಗೆ ಹೊಸದಾಗಿ ಬಂದ ಬೆಳ್ಳಿ ಪಟದಿಂದ ಮಹತ್ವ ಬಂತೆಂದು. ಆ ಬೆಳ್ಳಿ ಪಟಕ್ಕಿಂತ ಗೋಡೆಗೆ ಬಡಿದು ಎಷ್ಟೊ ಕಾಲವಾಗಿದ್ದರೂ ಯಾವ ಶೋಭೆಯನ್ನು ತೋರದೆ ಇದ್ದೂ ಇಲ್ಲದಂತಿದ್ದ ಆ ಮೊಳೆಗೇ ಹೆಚ್ಚಿನ ಮಹತಿಯೆನಿಸಿತವಳಿಗೆ.

ಇತ್ತಿತ್ತಲಾಗಿ ಪಾಂಡು ಮಾಮ ಅವಳೊಡನೆ ಮಾತುಕತೆಯಾಡುವುದು ಹೆಚ್ಚಿತ್ತು. 'ಕಾಫಿಕೊಡು ರುಕ್ಮಿಣಿ' ಎಂತಲೋ, 'ಮನೆಗೇನಾರು ಬೇಕಾ' ಎಂತಲೋ ಕೇಳುವುದಿತ್ತು. ಸಂಜೆ ತರಕಾರಿಗೆಂದು ಹೋದರೆ ಹಣ್ಣು ತರಕಾರಿಗಳ ಜೊತೆ ನಾಕುಮೊಳ ಘಮ್ಮೆನ್ನುವ ಮಲ್ಲಿಗೆ ತರುವುದೂ ಇತ್ತು. ಒಂದು ದಿನ ಹಾಗೇ ಅವನು ತಂದ ಹೂವಲ್ಲಿ ಒಂದು ಮೊಳ ತೆಗೆದು ಅವಳು ಮುಡಿದು ಬಿಟ್ಟಾಗ ಶಾರಕ್ಕ, 'ನಿನಗೇಂತ ಹೂತಂದಿಲ್ಲ. ಅದೇನಿದ್ರು ದೇವರ ಪಟಕ್ಕೆ' ಎಂದು ಕಟಕಿಯಾಡಿದಾಗ ಅಲ್ಲೇ ಇದ್ದ ಪಾಂಡುಮಾಮ, 'ಅಯ್ಯೋ, ಹೂವಿರೋದೆ ಹೆಣ್ಣುಮಕ್ಕಳು ಮುಡಿಯಕ್ಕಲ್ವ' ಎಂದು ಅಕ್ಕನಿಗೆ ಹೇಳುತ್ತಾ ರುಕ್ಮಿಣಿಯತ್ತ ಒಂದು ಲಘು ಲಹರಿಯಲ್ಲಿ ನೋಡಿದನಾಗಿ... ಶಾರಕ್ಕನ ಹೊಟ್ಟೆಯೊಳಗೊಳಗೆ ಒಂದಿಷ್ಟು ಹುಣಿಸೇ ಹಣ್ಣು ಕಿವಿಚಿದಂತಾಯ್ತು. ಆ ದಿನ ರಾತ್ರಿ ಎಲ್ಲರೂ ಮಲಗಿದಮೇಲೆ ಶಾರಕ್ಕ ತಮ್ಮನೊಡನೆ ಆಡಿದ ಮಾತು ರುಕ್ಮಿಣಿಯ ಕಿವಿಗೂ ಅಷ್ಟು ಬಿತ್ತು... 'ನೋಡು ಪಾಂಡು, ನಿಂಗೆ ಲೋಕಜ್ಞಾನವಿಲ್ಲ, ಹೆಂಗಸ್ರಿಗೆ ಅತೀ ಸಲಿಗೆ ಕೊಡಬಾರದು. ಹೆಚ್ಕೊಂಡ್ರೆ ಹದ್ದು ಮೀರ್ತಾವೆ. ಹಿಂಗ್ ಮಾಡೆ ಅವಳು ಬಾವಿ ಹಾರಿದ್ದು' ಎಂದಾಗ ಬಾವಿ ಹಾರಿದ್ದು ಯಾರೆಂದು ರುಕ್ಮಿಣಿಗೆ ಗೊಂದಲವಾಯಿತು. ಅದು ಪಾಂಡು ಮಾಮನ ಹೆಂಡತಿಯೇ ಇರಬೇಕೆನಿಸಿತು. ಬಹುಶಃ ಕಾಲು ಜಾರಿ ಬಿದ್ದ ಕತೆ ಸುಳ್ಳಾಗಿದ್ದು, ಬಾವಿಗೆ ಹಾರಿಕೊಂಡಿದ್ದೇ ನಿಜವಿರಬೇಕೆನಿಸಿತು. ಇದ್ದಕ್ಕಿದ್ದಂತೆ ಅವಳಿಗೆ ಮಾಮ ತಂದು ನೇತು ಹಾಕಿದ ಬೆಳ್ಳಿ ಪಟ ನೆನಪಾಗಿ ಅರೆ! ಅದನ್ನು ಮಾಮ ತನ್ನ ಮನೆಯಲ್ಲೂ ಹಾಕಿರಲಿಲ್ಲವೆ? ಹಾಗಾದರೆ ಅವರ ಮನೆಯಲ್ಲೇಕೆ ಯಾವುದೂ ಸರಿ ಹೋಗಲಿಲ್ಲ? ಅವರಿಗೆ ಮಕ್ಕಳೆ ಆಗಲಿಲ್ಲ... ಅದು ಹೋಗಲೆಂದರೆ ಅವರ ಹೆಂಡತಿ ಅಕಾಲದಲ್ಲಿ ಸತ್ತಳಲ್ಲ... ಎನಿಸಿತು. ಈ ಪಟಕ್ಕೂ ಮನೆಯ ನೆಮ್ಮದಿಗೂ ಒಂದಕ್ಕೊಂದು ಸಂಬಂಧವಿಲ್ಲವೆನಿಸಿತು. ಅದೇನೇ ಇರಲಿ... ಮಾಮ ಅವಳ ಪರವಾಗಿ ತನ್ನ ಅತ್ತೆಯ ಎದುರು ಮಾತಾಡಿದಾಗ, ತನಗೂ ಒಂದು ಅಸ್ತಿತ್ವ ಇದೆ ಎಂದೆನಿಸತೊಡಗಿತವಳಿಗೆ. ಇತ್ತೀಚೆಗೆ ಪಾಂಡು ಮಾಮನ ಮಾತು ನಗು, ವರ್ತನೆಗಳಲ್ಲೊಂದು ಹೊಸ ಮೆರುಗು ಕಾಣಿಸಿ ಚಕಿತಳಾಗತೊಡಗಿದಳು ರುಕ್ಮಿಣಿ. ಬೆಳಗಿನ ವೇಳೆ ಅವಳು ಅಡುಗೆ ಮಾಡುವಾಗ, 'ಹೆಚ್ಚುತ್ತೇನೆ. ತುರಿಯುತ್ತೇನೆ' ಎಂದು ಪಾಂಡು ಮಾಮ ಸದಾ ಅಡಿಗೆಮನೆಗೆ ಬರುತೊಡಗಿದಾಗ ಮೊದ ಮೊದಲು ಇರುಸು ಮುರುಸಾಗತೊಡಗಿದರೂ... ಆಮೇಲೆ ಅವಳಿಗೆ ಸಲೀಸಾಗತೊಡಗಿತು. 'ಇದು ಹೆಚ್ಚಿ ಇದು ಕಡೆಯಿರಿ' ಎನ್ನುವವರೆಗೆ ಬೆಳೆಯಿತು. ಗಟ್ಟಿ ಆಳಾದ ಅವಳಿಗೆ ಕೆಲಸದಲ್ಲಿ ಆದ ಸಹಾಯಕ್ಕಿಂತ ತನ್ನ ಜೊತೆಗೊಬ್ಬರು ಇದ್ದಾರೆ ಎಂಬ ಭಾವನೆಯೇ ಒಂದಿಷ್ಟು ನಿರಾಳವನ್ನು ತರತೊಡಗಿತ್ತು. ಘನಗಂಭೀರ ಮುಖಮುದ್ರೆಯಿಂದ ಸದಾ ಯಂತ್ರದಂತೆ ದುಡಿಯುತ್ತಿದ್ದ ರುಕ್ಮಿಣಿ ತುಸು ಗೆಲುವಾಗಿ ಚೆಲುವಾಗತೊಡಗಿದಳು. ಅವಳ ಒಬ್ಬನೇ ಮಗನನ್ನು ಪಾಂಡು ಮಾಮ ಹೊರಗೆ ಸುತ್ತಾಡಿಸಿಕೊಂಡು ಹೊರಗಿನ ತಿಂಡಿ ತೀರ್ಥಗಳನ್ನು ಕೊಡಿಸಿಕೊಂಡು ಬರತೊಡಗಿದಾಗ ಒಂದಿಷ್ಟು ಖುಷಿಯಾಗುತ್ತಿತ್ತು ರುಕ್ಮಿಣಿಗೆ. ರಾಮಣ್ಣ ಇದ್ದರೂ ಇಲ್ಲದಿದ್ದರೂ ಮನೆ ಗಲಗಲನೆ ಇವರಿಬ್ಬರ ಮಾತುಗಳಿಂದ ತುಂಬಿಹೋಗುತ್ತಿತ್ತು. ಮಗುವೂ ಚಟುವಟಿಕೆಯಿಂದ ಗೆಲುವಾಯ್ತು. ಅದೊಂದು ದಿನ ಮಧ್ಯಾಹ್ನದೂಟಕ್ಕೆ ಬಂದ ರಾಮಣ್ಣನಿಗೆ ಊಟ ಬಡಿಸಲು ತಟ್ಟೆ ಲೋಟಗಳನ್ನಿಟ್ಟು ಪಕ್ಕದಲ್ಲೇ ಮಾಮನಿಗೂ ಅತ್ತೆಗೂ ತಟ್ಟೆ ಹಾಕಿ ಬಿಸಿಬಿಸಿ ಅನ್ನ ತೋಡಿಕೊಂಡು ಬಡಿಸಿ ಮೇಲೆ ಬೂದುಗುಂಬಳದ ಹುಳಿ ಬಡಿಸಿ, ಬಾಳಕ, ಅರಳು ಸಂಡಿಗೆಗಳ ಪ್ಲೇಟನ್ನು ಬದಿಗಿರಿಸಿದಾಗ... ಏನೂ ಪ್ರತಿಕ್ರಿಯೆಯಿಲ್ಲದೆ